## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕೃಷಿ ವೃತ್ತಿಗಳನ್ನು ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ

**ಸರ್ಕಾರಿ ಆದೇಶ ಸಂಖ್ಯೆ:ಕೃಇ/50/ಕೃಇಕ/2013, ಬೆಂಗಳೂರು,**

**ದಿನಾಂಕ 21ನೇ ಜನವರಿ 2014.**

ಓದಲಾಗಿದೆ:-

1) ಸರ್ಕಾರಿ ಆದೇಶ ಸಂಖ್ಯೆ:ಕೃಇ/50/ಕೃಇಕ/2013(ಭಾಗ-1), ದಿನಾಂಕ 17.09.2013
2) ತಿದ್ದುಪಡಿ ಆದೇಶ ಸಂಖ್ಯೆ:ಕೃಇ/50 /ಕೃಇಕ/2013, ದಿನಾಂಕ 17.10.2013.
3) ಅನಧಿಕೃತ ಟಿಪ್ಪಣಿ ಸಂಖ್ಯೆ:ಕೃಇ/50/ಕೃಯೋಕಾ/2013, ದಿನಾಂಕ 17.10.2013
4) ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ:ಕಾಇ/363/ಇಟಿಐ/2013, ದಿನಾಂಕ 05.01.2014.

---

ಪ್ರಸ್ತಾವನೆ:-

ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರುವ 2013-14ನೇ ಆಯವ್ಯಯ ಭಾಷಣದ ಕಂಡಿಕೆ 60 ರಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕೃಷಿಯನ್ನೂ ಸಹ ಒಂದು ಪರಿಣಿತ ವಿಷಯವನ್ನಾಗಿ ಪರಿಗಣಿಸಿ ಕೃಷಿ ಯಂತ್ರೋಪಕರಣ, ಸಂಸ್ಕರಣಾ ಘಟಕಗಳು, ಹನಿ/ತುಂತುರು ನೀರಾವರಿ ಉಪಕರಣಗಳು ಮತ್ತು ಇತ್ಯಾದಿಗಳ ಬಗ್ಗೆ ಪರಿಶೀಲಿಸಲಾಗುವುದೆಂದು ಘೋಷಿಸಲಾಗಿದ್ದು, ಈ ಸಂಬಂಧ ಮೇಲೆ(1)ರಲ್ಲಿ ಓದಲಾದ ದಿನಾಂಕ 17.09.2013ರ ಆದೇಶದಲ್ಲಿ, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ತಾತ್ವಿಕ ಅನುಮೋದನೆ ನೀಡಲಾಗಿದೆ.

ಮೇಲೆ(2)ರಲ್ಲಿ ಓದಲಾದ ತಿದ್ದುಪಡಿ ಆದೇಶದಲ್ಲಿ ಸದರಿ ಯೋಜನೆಗೆ ಅವಶ್ಯವಾದ ವೆಚ್ಚ ರೂ.100.00 ಲಕ್ಷ ಬೇಸಾಯ ಸಂಬಂಧಿತ ಚಟುವಟಿಕೆಗಳು ಯೋಜನೆಯ ಲೆಕ್ಕ ಶೀರ್ಷಿಕೆ 2401-00-109-0-21 ಇತರೆ ವೆಚ್ಚಗಳು ಉಪ ಲೆಕ್ಕ ಶೀರ್ಷಿಕೆ 059 ರಡಿ ಭರಿಸಲು ಆದೇಶಿಸಲಾಗಿದೆ.

ಮೇಲೆ(3)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಸದರಿ ಯೋಜನೆಗೆ ಈಗಾಗಲೇ ತಾತ್ವಿಕ ಅನುಮೋದನೆ ನೀಡಲಾಗಿದ್ದು, ಈ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸುವ ಜವಾಬ್ದಾರಿಯು ಕಾರ್ಮಿಕ ಇಲಾಖೆಯದಾಗಿರುತ್ತದೆ ಎಂದು ತಿಳಿಸಲಾಗಿದೆ. ಆದ್ದರಿಂದ ಈ ಯೋಜನೆಗೆ ಸಂಬಂಧಿಸಿದಂತೆ ಡಾ:ಎಸ್.ಎ.ಪಾಟೀಲ್, ಅಧ್ಯಕ್ಷರು, ಕೃಷಿ ಮಿಷನ್‌ರವರು ಸಲ್ಲಿಸಿರುವ ಕೃಷಿ ಕೈಗಾರಿಕಾ ತರಬೇತಿಗೆ ಸಂಬಂಧಿಸಿದ ಪಠ್ಯಕ್ರಮದ ವಿವರಗಳನ್ನು ಸಲ್ಲಿಸಿ, ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಕಾರ್ಮಿಕ ಇಲಾಖೆಯನ್ನು ಕೋರಲಾಗಿತ್ತು.

ಮೇಲೆ(4)ರಲ್ಲಿ ಓದಲಾದ ಕಾರ್ಮಿಕ ಇಲಾಖೆಯ ಅನಧಿಕೃತ ಟಿಪ್ಪಣಿಯಲ್ಲಿ ,ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ ಇವರ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕೃಷಿ ವೃತ್ತಿ ಆರಂಭಿಸಲು 15 ತರಬೇತಿ ಕೇಂದ್ರಗಳನ್ನು ಗುರುತಿಸಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಕೃಷಿ ವೃತ್ತಿ ಕೋರ್ಸ್‌ಗಳಿಗಾಗಿ ಪ್ರತಿ ಕೇಂದ್ರಕ್ಕೆ ಮೂರು ಬೋಧಕ ಹುದ್ದೆಗಳನ್ನು ಸೃಜಿಸುವ ಅವಶ್ಯಕತೆ ಇದೆ. ಈ ಹುದ್ದೆಗಳನ್ನು ಸೃಜಿಸಲು ವಾರ್ಷಿಕ

ರೂ.10.28 ಲಕ್ಷ ವೆಚ್ಚದ ಅವಶ್ಯಕತೆ ಇದೆ. ಈ ಹುದ್ದೆಗಳನ್ನು ಸೃಜಿಸುವವರೆಗೆ ಅತಿಥಿ ಬೋಧಕರ ಸೇವೆಯನ್ನು ಬಳಸಿಕೊಳ್ಳಲು ಅನುಮತಿ ನೀಡಬೇಕಾಗುತ್ತದೆ. ಈಗಾಗಲೇ ತಿಳಿಸಿರುವಂತೆ ಪ್ರತಿ ಕೇಂದ್ರ ಸ್ಥಾಪನೆಗೆ ಮೊದಲನೆ ಹಂತದಲ್ಲಿ ಆವರ್ತಕ ವೆಚ್ಚಗಳಿಗಾಗಿ ರೂ.12.79 ಲಕ್ಷಗಳ ಹಾಗೂ ಅನಾವರ್ತಕ ವೆಚ್ಚಗಳಿಗಾಗಿ ರೂ.70.00 ಲಕ್ಷಗಳು ಒಟ್ಟಾರೆ ಪ್ರತಿ ಸಂಸ್ಥೆಗೆ ರೂ. 82.79 ಲಕ್ಷಗಳ ಅವಶ್ಯಕತೆ ಉಂಟಾಗುತ್ತದೆ ಹಾಗೂ 2013-14ನೇ ಸಾಲಿಗೆ ಪ್ರತಿ ಸಂಸ್ಥೆಗೆ ರೂ.40.00 ಲಕ್ಷಗಳ ಅನುದಾನದ ಅವಶ್ಯಕತೆ ಇದೆ. ಅದರಂತೆ ಸದರಿ 15 ಸಂಸ್ಥೆಗಳನ್ನು ಪ್ರಾರಂಭಿಸಲು 2013-14ನೇ ಸಾಲಿನಲ್ಲಿ ರೂ.600.00 ಲಕ್ಷಗಳು ಬೇಕಾಗುತ್ತದೆ. ಅಂತೆಯೇ ಸೂಕ್ತ ಆಡಳಿತಾತ್ಮಕ ಆದೇಶ ಹೊರಡಿಸಿ 15 ಸಂಸ್ಥೆಗಳಲ್ಲಿ ಕೃಷಿ ವೃತ್ತಿಗಳನ್ನು ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡುವಂತೆ ಕೋರಲಾಗಿದೆ.

ಕಾರ್ಮಿಕ ಇಲಾಖೆಯ ಮೇಲ್ಕಂಡ ಕೋರಿಕೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲು ತೀರ್ಮಾನಿಸಲಾಗಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2013-14ನೇ ಸಾಲಿನಲ್ಲಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕೃಷಿ ಕುರಿತು ತರಬೇತಿ ನೀಡಲು ಈಗಾಗಲೇ ಆದೇಶ ಸಂಖ್ಯೆ:ಕೃಇ/50/ಕೃಇಕ/2013(ಭಾಗ-1) ದಿನಾಂಕ 17.09.2013ರಲ್ಲಿ ನೀಡಿರುವ ತಾತ್ವಿಕ ಅನುಮೋದನೆಯಂತೆ ಈ ಆದೇಶದ ಅನುಬಂಧದಲ್ಲಿರುವಂತೆ 15 ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ರೂ.500.00ಲಕ್ಷಗಳ ವೆಚ್ಚದಲ್ಲಿ ಕೃಷಿ ವೃತ್ತಿಗಳನ್ನು ಪ್ರಾರಂಭಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಕೂಡಲೇ ಕೃಷಿ ವೃತ್ತಿಗಳನ್ನು ಪ್ರಾರಭಿಸತಕ್ಕದ್ದು.

ಸದರಿ ಯೋಜನೆಗೆ 2013-14ನೇ ಸಾಲಿನಲ್ಲಿ ರೂ.100.00 ಲಕ್ಷ (ಒಂದು ನೂರು ಲಕ್ಷ ರೂಪಾಯಿಗಳು ಮಾತ್ರ)ಗಳನ್ನು ಕಾರ್ಮಿಕ ಇಲಾಖೆಗೆ ಬಿಡುಗಡೆ ಮಾಡಲಾಗಿದೆ.

ಈ ವೆಚ್ಚವನ್ನು 2013-14ನೇ ಸಾಲಿನಲ್ಲಿ ಬೇಸಾಯ ಸಂಬಂಧಿತ ಚಟುವಟಿಕೆಗಳು ಯೋಜನೆಯ ಲೆಕ್ಕ ಶೀರ್ಷಿಕೆ 2401-00-109-0-21 ಇತರೆ ವೆಚ್ಚಗಳು ಉಪ ಲೆಕ್ಕ ಶೀರ್ಷಿಕೆ 059 ರಡಿ ಭರಿಸತಕ್ಕದ್ದು ಹಾಗೂ ಈ ಸಂಬಂಧ ಕಾರ್ಮಿಕ ಇಲಾಖೆಯು ನೀಡುವ ಗ್ರಾಂಟ್-ಇನ್-ಏಡ್ ಬಿಲ್ಲಿಗೆ ಮೇಲುಸಹಿ ಮಾಡುವ ಅಧಿಕಾರವನ್ನು ಕೃಷಿ ನಿರ್ದೇಶಕರಿಗೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ).

**ಇವರಿಗೆ:-**

1) ಪ್ರಧಾನ ಮಹಾಲೇಖಪಾಲರು(ಜಿ & ಎಸ್.ಎಸ್.ಎ), ಕರ್ನಾಟಕ, ಬೆಂಗಳೂರು.

2) ಪ್ರಧಾನ ಮಹಾಲೇಖಪಾಲರು(ಇ & ಆರ್.ಎಸ್.ಎ), ಕರ್ನಾಟಕ, ಬೆಂಗಳೂರು.
3) ಪ್ರಧಾನ ಮಹಾಲೇಖಪಾಲರು(ಎ &ಇ), ಕರ್ನಾಟಕ, ಬೆಂಗಳ್ರುರು.
4) (ಆ&ಇ), ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5) ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ ಮತ್ತು ರಾಜಕೀಯ ವಿಶ್ರಾಂತಿ ವೇತನ) ಬೆಂಗಳೂರು.
6) ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
7) ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು.
8) ನಿರ್ದೇಶಕರು, ಪರಿಯೋಜನಾ ರಚನಾ ವಿಭಾಗ, ಯೋಜನಾ ಇಲಾಖೆ, ಬೆಂಗಳೂರು.
9) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣಾ ಹಾಗೂ ರಫ್ತು ನಿಗಮ ನಿಯಮಿತ, ನಂ. 17, ರಿಚ್‌ಮಂಡ್ ರಸ್ತೆ, ಬೆಂಗಳೂರು.
10) ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು / ಧಾರವಾಡ / ರಾಯಚೂರು ಮತ್ತು ವಿಶೇಷಾಧಿಕಾರಿಗಳು, ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ, ಶಿವಮೊಗ್ಗ-577204.
11) ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
2) ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
13) ಜಂಟಿ ನಿರ್ದೇಶಕರು, ಹುಜೂರು ಖಜಾನೆ, ಬೆಂಗಳೂರು.
14) ಸರ್ಕಾರಧ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-4), ವಿಧಾನ ಸೌಧ, ಬೆಂಗಳೂರು.
15) ಸರ್ಕಾರದ ಅಧೀನ ಕಾರ್ಯದರ್ಶಿ, ಕೃಷಿ ಇಲಾಖೆ (ಕೃಷಿ ಸೇವೆ).
16) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು.
17) ಸರ್ಕಾರದ ಉಪ ಕಾರ್ಯದರ್ಶಿ-1ರವರ ಆಪ್ತ ಸಹಾಯಕರು, ಇಲಾಖೆ, ಬೆಂಗಳೂರು.
18) ಶಾಖಾಧಿಕಾರಿ, ಕೃಷಿ ಯೋಜನಾ ಘಟಕ, ಎ ಮತ್ತು ಬಿ, ಕೃಷಿ ಇಲಾಖೆ.
19) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.